# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : **629**

ಸದಸ್ಯರ ಹೆಸರು : **ಡಾ. ವೈ. ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ)**

ಉತ್ತರಿಸಬೇಕಾದ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸಬೇಕಾದ ದಿನಾಂಕ : 12-07-2023

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಕೆಲವು ಖಾಸಗಿ ಟ್ರಾನ್ಸ್‌ಪೋರ್ಟ್ ಕಂಪನಿಗಳು ಒಂದೇ ವಾಹನದ ಸಂಖ್ಯೆ / ಪರವಾನಿಗೆಯನ್ನು ಬಳಸಿ ಎರಡು-ಮೂರು ಬಸ್ಸುಗಳನ್ನು ಚಲಾಯಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br>ಒಂದೇ ವಾಹನದ ಸಂಖ್ಯೆ / ಪರವಾನಿಗೆಯನ್ನು ಬಳಸಿರುವ ಒಟ್ಟು 8 ಪ್ರಕರಣಗಳು ಬೆಳಕಿಗೆ ಬಂದಿವೆ. ವಿವರಗಳು ಕೆಳಕಂಡಂತಿವೆ: |
| ಆ. | ಬಂದಿದ್ದಲ್ಲಿ, ಇಂತಹ ಎಷ್ಟು ಪ್ರಕರಣಗಳು ಬೆಳಕಿಗೆ ಬಂದಿವೆ; (ಜಿಲ್ಲಾವಾರು ವಿವರಗಳನ್ನು ನೀಡುವುದು) | (see table below) |

| ಕ್ರ. ಸಂ. | ವಾಹನ ಸಂಖ್ಯೆ | ಸಂಬಂಧಿಸಿದ ಜಿಲ್ಲೆ |
|---|---|---|
| 1. | PY-01/CN-6804 | ಬೆಂಗಳೂರು ಗ್ರಾಮಾಂತರ |
| 2. | KA-16/A-7159 | ಬೆಂಗಳೂರು ಗ್ರಾಮಾಂತರ |
| 3. | KA-22/B-4738 | ಕೋಲಾರ |
| 4. | KA-06/D-4815 | ಕೋಲಾರ |
| 5. | NL-01/B-1794 | ಬೆಳಗಾವಿ |
| 6. | KA-32/A-9915 | ಬೆಂಗಳೂರು ನಗರ |
| 7. | KA-51/B-2887 | ಬೆಂಗಳೂರು ನಗರ |
| 8. | KA-51/B-2878 | ಬೆಂಗಳೂರು ನಗರ |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಇ. | ಇಂತಹ ಪ್ರಕರಣಗಳಲ್ಲಿ ಭಾಗಿಯಾಗಿರುವವರ ವಿರುದ್ಧ ಸರ್ಕಾರವು ಕೈಗೊಂಡಿರುವ ಕಠಿಣ ಕ್ರಮಗಳೇನು; | ಒಂದೇ ವಾಹನದ ಸಂಖ್ಯೆ / ಪರವಾನಿಗೆಯನ್ನು ಬಳಸಿರುವ ಪ್ರಕರಣಗಳನ್ನು ತಡೆಗಟ್ಟುವ ಕುರಿತು ರಾಜ್ಯಾದ್ಯಂತ ವಿಶೇಷ ತನಿಖಾ ತಂಡಗಳನ್ನು ರಚಿಸಿ ಪ್ರವರ್ತನ ಕಾರ್ಯ ಕೈಗೊಳ್ಳುತ್ತಿದ್ದು, ಅಂತಹ ವಾಹನಗಳನ್ನು ಪತ್ತೆಹಚ್ಚಿ ಕಾನೂನು ರೀತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.<br>ವಿವರಗಳನ್ನು **ಅನುಬಂಧದಲ್ಲಿ** ಒದಗಿಸಲಾಗಿದೆ. |
| ಈ. | ಇಂತಹ ಪ್ರಕರಣಗಳ ಬಗ್ಗೆ ಗೊತ್ತಿದ್ದರೂ ಇಂತಹವರ ಜೊತೆ ಶಾಮೀಲಾಗಿರುವ ಅಧಿಕಾರಿಗಳ ವಿರುದ್ಧ ಸರ್ಕಾರವು ಕೈಗೊಂಡ ಕ್ರಮಗಳೇನು? | ಇಂತಹ ಪ್ರಕರಣಗಳಲ್ಲಿ ಅಧಿಕಾರಿಗಳು ಶಾಮೀಲಾಗಿರುವ ಕುರಿತು ಯಾವುದೇ ಮಾಹಿತಿಯಿರುವುದಿಲ್ಲ. |

ಟಿಡಿ 42 ಟಿಡಿಕ್ಯೂ 2023

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು.

ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಡಾ. ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 629 ಕ್ಕೆ ಅನುಬಂಧ

1. **PY-01/CN-6804:** ಅತ್ತಿಬೆಲೆ ತನಿಖಾ ಠಾಣೆಯ ವ್ಯಾಪ್ತಿಯಲ್ಲಿ ಸದರಿ ವಾಹನಗಳನ್ನು ತಪಾಸಣೆಗೊಳಪಡಿಸಿ ತನಿಖಾ ವರದಿ ದಾಖಲಿಸಿದೆ. ಈ ವಾಹನಗಳ ವಿರುದ್ಧ ಕ್ರಮ ಜರುಗಿಸಲು ಆರಕ್ಷಕ ನಿರೀಕ್ಷಕರು, ಅತ್ತಿಬೆಲೆ ರವರಿಗೆ ಕೋರಲಾಗಿದ್ದು, ಅತ್ತಿಬೆಲೆ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ನಂ.22/2023 ನ್ನು ಕಲಂ 419, 420 ಐಪಿಸಿ ಪ್ರಕರಣವು ಸಿ.ಸಿ 111 ಅಡಿಷನಲ್ ಸಿವಿಲ್ ಜಡ್ಜ್ & ಜೆಎಂಎಫ್‌ಸಿ ನ್ಯಾಯಾಲಯ, ಆನೇಕಲ್ ಇಲ್ಲಿ ವಿಚಾರಣೆಯಲ್ಲಿದೆ.
2. **KA-16/A-7159 :-** ಸದರಿ ನೋಂದಣಿ ಸಂಖ್ಯೆಯ ಎರಡು ವಾಹನಗಳನ್ನು ಜಪ್ತಿ ಮಾಡಿದ್ದು, ಅದರಲ್ಲಿ ನಕಲಿ ನೋಂದಣಿ ಸಂಖ್ಯೆ ಅಳವಡಿಸಿರುವ ಒಂದು ಬಸ್ಸನ್ನು ಜಪ್ತಿಗೊಳಿಸಿ ಮಾದನಾಯಕನಹಳ್ಳಿ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್. ದಾಖಲಿಸಿದ್ದು, ಪ್ರಕರಣವು ವಿಚಾರಣಾ ಹಂತದಲ್ಲಿರುತ್ತದೆ.
3. **KA-22/B-4738:-** ಸದರಿ ನೋಂದಣಿ ಸಂಖ್ಯೆಯ ಎರಡು ವಾಹನಗಳನ್ನು ಜಪ್ತಿ ಮಾಡಿದ್ದು, ವಾಹನಗಳನ್ನು ಮುಟ್ಟುಗೋಲು ಹಾಕಿಕೊಂಡು ಮಾಲೂರು ಪೊಲೀಸ್ ಠಾಣೆ ಆವರಣದಲ್ಲಿ ನಿಲ್ಲಿಸಲಾಗಿದೆ ಹಾಗೂ ವಾಹನದ ನೈಜತೆಗಾಗಿ ಮೂಲ ದಾಖಲೆಗಳನ್ನು ಸಹಾಯಕ ಪ್ರಾದೇಶಿಕ ಸಾರಿಗೆ ಕಛೇರಿ, ಕೆ.ಜಿ.ಎಫ್. ಇಲ್ಲಿಗೆ ಹಾಜರುಪಡಿಸಲು ವಾಹನ ಮಾಲೀಕರಿಗೆ ತಿಳಿಸಲಾಗಿರುತ್ತದೆ.
4. **KA-06/D-4815:-** ಸದರಿ ನೋಂದಣಿ ಸಂಖ್ಯೆಯ ಎರಡು ವಾಹನಗಳನ್ನು ಜಪ್ತಿ ಮಾಡಿದ್ದು, ವಾಹನಗಳನ್ನು ಮುಟ್ಟುಗೋಲು ಹಾಕಿಕೊಂಡು ಮುಳಬಾಗಿಲು ಗ್ರಾಮಾಂತರ ಪೊಲೀಸ್ ಠಾಣೆ ಆವರಣದಲ್ಲಿ ನಿಲ್ಲಿಸಲಾಗಿದೆ ಹಾಗೂ ವಾಹನದ ನೈಜತೆಗಾಗಿ ಮೂಲ ದಾಖಲೆಗಳನ್ನು ಪ್ರಾದೇಶಿಕ ಸಾರಿಗೆ ಕಛೇರಿ, ಕೋಲಾರ ಇಲ್ಲಿಗೆ ಹಾಜರುಪಡಿಸಲು ವಾಹನ ಮಾಲೀಕರಿಗೆ ತಿಳಿಸಲಾಗಿರುತ್ತದೆ.
5. **NL-01/B-1794 :-** ನೆಲಮಂಗಲ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ನಕಲಿ ನೋಂದಣಿ ಸಂಖ್ಯೆಯಲ್ಲಿ ಬಸ್ ಓಡಿಸುತ್ತಿರುವುದನ್ನು ಪತ್ತೆಹಚ್ಚಲಾಗಿದ್ದು, ಅದರಂತೆ, ಎನ್‌ಎಲ್-01/ಬಿ-1794 ನೋಂದಣಿ ಸಂಖ್ಯೆಯನ್ನು ಹಾಕಿಕೊಂಡು ಸಂಚರಿಸುತ್ತಿದ್ದ ವಾಹನವನ್ನು ಜಪ್ತಿಗೊಳಿಸಿ ದಿನಾಂಕ:20-12-2020ರಂದು ನೆಲಮಂಗಲ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್. ನಂ.226/2020ನ್ನು ದಾಖಲಿಸಲಾಗಿದೆ.
6. **KA-32/A-9915:-** ಸದರಿ ನೋಂದಣಿ ಸಂಖ್ಯೆಯ ಎರಡು ವಾಹನಗಳನ್ನು ಸಂಚರಿಸುತ್ತಿರುವ ಕುರಿತು ಸರ್ಜಾಪುರ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ 219/2014 ದಾಖಲಾಗಿದ್ದು, ಮಾನ್ಯ ಜೆ.ಎಂ.ಎಫ್.ಸಿ. ನ್ಯಾಯಾಲಯ, ಆನೇಕಲ್ ಇಲ್ಲಿ ಪ್ರಕರಣವು ವಿಚಾರಣಾ ಹಂತದಲ್ಲಿದೆ.
7. **KA-51/B-2887:-** ಸದರಿ ನೋಂದಣಿ ಸಂಖ್ಯೆಯ ನಾಲ್ಕು ವಾಹನಗಳನ್ನು ಜಪ್ತಿ ಮಾಡಿದ್ದು, ವಾಹನಗಳನ್ನು ತಪಾಸಣೆಗೊಳಪಡಿಸಿ, ಮೋಟಾರು ವಾಹನಗಳ ಕಾಯ್ದೆ 1988ರ ಪ್ರಕಾರ ಕ್ರಮ ಜರುಗಿಸಿ, ದಂಡ ಮತ್ತು ತೆರಿಗೆ ವಿಧಿಸಲಾಗಿದೆ ಹಾಗೂ ಮೈಕೋ ಲೇಔಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.
8. **KA-51/B-2878:-** ಸದರಿ ನೋಂದಣಿ ಸಂಖ್ಯೆಯ ಎರಡು ವಾಹನಗಳನ್ನು ಜಪ್ತಿ ಮಾಡಿದ್ದು, ವಾಹನಗಳನ್ನು ತಪಾಸಣೆಗೊಳಪಡಿಸಿ, ಮೋಟಾರು ವಾಹನಗಳ ಕಾಯ್ದೆ 1988ರ ಪ್ರಕಾರ ಕ್ರಮ ಜರುಗಿಸಿ, ದಂಡ ಮತ್ತು ತೆರಿಗೆ ವಿಧಿಸಲಾಗಿದೆ ಹಾಗೂ ಮೈಕೋ ಲೇಔಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.